**‘ಕರಮಜೋವ್ ಬ್ರದರ್ಸ್’ ಸರಳ ಓದಿಗೆ ಅಪ್ಪ ಮಕ್ಕಳ ಕಥಾನಕದಂತೆ ಕಂಡರೂ ಒಳ ಇಳಿದಂತೆಲ್ಲಾ ಅದು ಬಿಚ್ಚಿಡುವ ಲೋಕ ದಂಗು ಬಡಿಸುತ್ತದೆ. ಸಾಧಾರಣ ಅಪ್ಪ ಮಕ್ಕಳ ಕಥೆಯನ್ನು ಹೇಳುತ್ತಲೇ ದೇವರು, ಧರ್ಮ, ಕಾಮ, ಪ್ರೇಮ, ದುರಾಸೆ, ಮುಂತಾದವುಗಳ ಮೂಲಕ ಒಂದು ಕಾಲಘಟ್ಟದ ಮನುಕುಲದ ಕಥೆಯನ್ನು ಕಟ್ಟಿಕೊಡುತ್ತದೆ.**

ಕೇವಲ ರಷ್ಯಾದ ಲೇಖಕನಾಗಿ ಮಾತ್ರ ಉಳಿಯದೇ ಜಗತ್ತಿನ ಅಪರೂಪದ ಕಲಾತ್ಮಕ ಸೃಷ್ಟಿಕರ್ತರಲ್ಲಿ ಒಬ್ಬನಾಗಿಬಿಡುತ್ತಾನೆ. ಇದಕ್ಕೆ ‘ಕ್ರೈಂ ಅಂಡ್ ಪನಿಶ್‌ಮೆಂಟ್’, ‘ಕರಮಜೋವ್ ಬ್ರದರ್ಸ್’ ಹಾಗೂ ‘ನೋಟ್ಸ್ ಫ್ರಂ ಅಂಡರ್‌ವರ್ಡ್’ ಅತ್ಯುತ್ತಮ ನಿದರ್ಶನಗಳಾಗಿ ಕಾಣಬಲ್ಲವು. ಒಂದರ್ಥದಲ್ಲಿ ಇವುಗಳನ್ನು ಅಂತರ್ ಸಂಬಂಧೀ ಕಥಾನಕಗಳು ಅಂತ ಕರೆಯಬಹುದು. ಕಾರಣ, ಈ ಮೂರೂ ಕಥಾನಕಗಳು ಒಂದೇ ಸ್ಥಾಯಿಭಾವದಿಂದ ಚಿಮ್ಮಲ್ಪಟ್ಟಂತೆ, ಹೆಣೆಯಲ್ಪಟ್ಟಂತೆ, ಆ ಸ್ಥಾಯಿಭಾವದ ಮುಂದುವರೆದ ಭಾಗದಂತೆ ಕಾಣುತ್ತವೆ. ದಾಸ್ತೋವ್‌ಸ್ಕಿ ತಾನು ತನ್ನ ಬಾಲ್ಯದಲ್ಲಿ ಅನುಭವಿಸಿದ, ಅದರಲ್ಲೂ ಸೆರಮನೆಯ ಅನಭವಗಳು ಮರೆಯಲಾಗದ ಮಡುಗಟ್ಟಿದ ಯಾತನೆಗಳಂತೆ ಇವುಗಳಲ್ಲಿ ಕಲಾತ್ಮಕವಾಗಿ ರೂಪು ತಳೆದಿವೆ.

ಏಕೆಂದರೆ, ದಾಸ್ತೋವ್‌ಸ್ಕಿಯ ಬಾಲ್ಯ ಅಷ್ಟು ಸುಖಕರವಾಗಿರಲಿಲ್ಲ. 1821ರಲ್ಲಿ ಮಾಸ್ಕೋದಲ್ಲಿ ಜನಿಸಿದ್ದ ದಾಸ್ತೋವ್‌ಸ್ಕಿ ತನ್ನ ಹದಿನಾರನೆಯ ವಯಸ್ಸಿಗೇ ಕ್ಷಯದಿಂದ ಬಳಲುತ್ತಿದ್ದ ತಾಯಿಯನ್ನು ಕಳೆದುಕೊಳ್ಳುತ್ತಾನೆ. ಅದಾದ ಕೇವಲ ಎರಡು ವರ್ಷಕ್ಕೆ ಅವನ ಅಪ್ಪ ತನ್ನ ಜೀತದಾಳುಗಳಿಂದಲೇ ಕೊಲ್ಲಲ್ಪಡುತ್ತಾನೆ. ಸಾಲದ್ದಕ್ಕೆ ಅದೇ ಹೊತ್ತಿಗೆ ಅವನಿಗೆ ಮೂರ್ಛೆ ರೋಗ ಶುರುವಾಗುತ್ತದೆ. ಅಂತೆಯೇ ಅದು ಕೊನೆಯವರೆಗೂ ಅವನನ್ನು ಪೀಡಿಸುತ್ತದೆ. ಹಾಗಾಗಿ ಈ ಮೂರ್ಛೆ ರೋಗ ಇರುವ ಪಾತ್ರಗಳು ದಾಸ್ತೋವ್‌ಸ್ಕಿಯ ಬಹುತೇಕ ಬರವಣಿಗೆಗಳಲ್ಲಿ ಕಾಣಸಿಗುತ್ತವೆ. ಉದಾ: ‘ಇನ್ಸಲ್ಟೆಡ್ ಅಂಡ್ ಹ್ಯುಮಿಲಿಯೇಟೆಡ್’ದ ನೆಲ್ಲಿ ಪಾತ್ರ, ‘ಈಡಿಯಟ್’ದ ಮಿಷ್ಕನ್ ಪಾತ್ರ, ‘ಪೊಸೆಸ್ಟ್’ನ ಕಿರಿಲೌವ್ ಪಾತ್ರ, ‘ಬ್ರದರ್ಸ್ ಕರಮಜೋವ್’ನ ಸ್ಮೆಡ್ರ್ಯಾಕೊವ್ ಪಾತ್ರ. ಆಗ ದಾಸ್ತೋವ್‌ಸ್ಕಿಯು ಅನಿವಾರ್ಯವಾಗಿ ಸಂಕಷ್ಟದ ದಿನಗಳನ್ನು ಕಾಣುತ್ತಾನೆ. ಆಗ ಅನುಭವಿಸಿದ ಆ ಯಾತನಾಮಯ ದಿನಗಳು ಅವನ ಕೊನೆಯ ದಿನಗಳವರೆಗೂ ಮಾಸದೇ ಉಳಿದು ದಾಸ್ತೋವ್‌ಸ್ಕಿಯ ಸೃಜನಶೀಲ ಬರಹಗಳಲ್ಲಿ ಮತ್ತೆಮತ್ತೆ ಇಣುಕುತ್ತಲೇ ಹೋಗುತ್ತವೆ. ಎಂಜಿನಿಯರಿಂಗ್ ಮುಗಿಸಿದರೂ ಯಾವುದೇ ಸರ್ಕಾರಿ ಕೆಲಸಕ್ಕೂ ಹೋಗದೆ ಪೂರಾ ಬರವಣಿಗೆಯತ್ತ ದಾಸ್ತೋವ್‌ಸ್ಕಿಯ ಮನಸ್ಸು ವಾಲುತ್ತದೆ. ಆ ಹೊತ್ತಲ್ಲಿ ದಾಸ್ತೋವ್‌ಸ್ಕಿಯ ಮೊದಲ ಕಾದಂಬರಿ ‘ಪೂರ್ ಫೋಕ್ಸ್’ (ಬಡ ಜನರು) ಪ್ರಕಟವಾಗುತ್ತದೆ. ಅದು ಲೇಖಕನಿಗೆ ಅಪಾರ ಯಶಸ್ಸನ್ನೂ ತಂದುಕೊಡುತ್ತದೆ. ಅನಂತರದ ದಿನಗಳಲ್ಲಿ ದಾಸ್ತೋವ್‌ಸ್ಕಿ ಸಮಾಜವಾದಿ ವಿಚಾರಧಾರೆಗಳತ್ತ ಆಕರ್ಷಿತನಾಗುತ್ತಾನೆ. ಜೊತೆಗೆ ಅಪಾರ ಓದಿಗೆ ತನ್ನನ್ನು ಒಡ್ಡಿಕೊಳ್ಳುತ್ತಾನೆ. ಪುಷ್ಕಿನ್, ಗೊಗೋಲ್‌ರ ಕೃತಿಗಳು, ಬಾಲ್‌ಝಾಕ್, ಹಾಫ್‌ಮನ್, ಜಾರ್ಜ್‌ಸ್ಯಾಂಡ್, ಯುರ್ಜಿಸ್, ವಿಕ್ಟರ್ ಹ್ಯುಗೋ, ಚಾರ್ಲ್ಸ್ ಡಿಕೆನ್ಸ್ ಮುಂತಾದ ಪ್ರಪಂಚದ ಶ್ರೇಷ್ಠ ಸಾಹಿತಿಗಳ ಸಾಹಿತ್ಯವನ್ನು ಓದುತ್ತಾನೆ ಹಾಗೂ ಆ ಲೇಖಕರ ಅಗಾಧ ಪ್ರಭಾವಕ್ಕೊಳಗಾಗುತ್ತಾನೆ. ಡಿಕೆನ್ಸ್ ಅಂದರಂತೂ ಅವನಿಗೆ ಪ್ರಾಣ.